ಕಲಬೆರಕೆ ಮದ್ಯ ಸರಬರಾಜಿನಿಂದ ಸತ್ತವರ ಸಂಖ್ಯೆ

೪೧೧ (೭೧೨) ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ತುಮಕೂರು ಜಿಲ್ಲೆಯಲ್ಲಿ ಇತ್ತೀಚೆಗೆ ಕಲಬೆರಕೆ ಮದ್ಯ ಸೇವನೆಯಿಂದಾಗಿ ಸತ್ತ ಪ್ರಕರಣಗಳೆಷ್ಟು ?

ಆ) ಕಲಬೆರಕೆ ಮದ್ಯ ಸರಬರಾಜು ಮತ್ತು ಗುತ್ತಿಗೆದಾರರ ವಿರುದ್ಧ ಇಲಾಖೆ ತೆಗೆದು ಕೊಂಡಿರುವ ಕ್ರಮವೇನು ?

ಇ) ಅನಧಿಕೃತ ಮತ್ತು ಗುತ್ತಿಗೆದಾರರು ಅಕ್ರಮವಾಗಿ ಸರಬರಾಜು ಮಾಡುತ್ತಿರುವ ಮದ್ಯದಿಂದ ಸಾವು ಸಂಭವಿಸಿದ್ದು ನಿಜವೇ ?

ಈ) ಅದನ್ನು ತಪ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು).—

ಅ) ಯಾವುದೂ ಇಲ್ಲ.

ಆ) (ಅ) ಗೆ ನೀಡಿರುವ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) (ಇ) ಗೆ ನೀಡಿರುವ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಸಾರಾಯಿ ಗುತ್ತಿಗೆ ನಿಯಮ ಉಲ್ಲಂಘನೆ

೪೧೨ (೭೧೧) ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಮೂರು ತಿಂಗಳು ಬ್ಯಾಂಕು ಗ್ಯಾರಂಟಿ ಕೊಡಲೇಬೇಕೆಂಬ ನಿಯಮವನ್ನು ಉಲ್ಲಂಘಿಸಿ ಸಾರಾಯಿ ಗುತ್ತಿಗೆಗಳು ನಡೆಯುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಆ ಸಾರಾಯಿ ಗುತ್ತಿಗೆದಾರರು ಯಾರು ಹಾಗೂ ಯಾವ ತಾಲ್ಲೂಕಿಗೆ ಸಂಬಂಧಿಸಿದವರು ?

ಇ) ಗುತ್ತಿಗೆದಾರರಿಂದ ಬಾಕಿ ಬರಬೇಕಾಗಿದ್ದು ಗುತ್ತಿಗೆಯನ್ನು ನಡೆಸಲು ಅನುಮತಿ ಕೊಡಲು ಕಾರಣವೇನು ಹಾಗೂ ಅವರುಗಳು ಯಾರು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು).—

ಅ) ಇಲ್ಲ.

ಆ) 'ಅ' ಪ್ರಶ್ನೆಗೆ ನೀಡಿದ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಇ) ಫೆಬ್ರವರಿ ೯೪ ರವರೆವಿಗೆ ೭೨.೧೮ ಕೋಟಿ ರೂ. ಗಳಷ್ಟು ಬಾಕಿ ಇದ್ದು (ಗುತ್ತಿಗೆದಾರರ ಪಟ್ಟಿ ಲಗತ್ತಿಸಿದೆ) ಈ ಮೊತ್ತದಲ್ಲಿ ೨೨-೩-೯೪ರ ತನಕ ೨೬.೦೧ ಕೋಟಿ ರೂ. ಗಳು ಬಂದಿರುತ್ತದೆ. ಉಳಿಕೆ ಕಿಸ್ತು ಬಾಕಿಗಾಗಿ ೫೩ ಗುತ್ತಿಗೆಗಳನ್ನು ಈಗಾಗಲೇ ಮುಕ್ತಾಯ ಮಾಡಿ ಆದೇಶ ನೀಡಲಾಗಿದೆ. ಬಾಕಿ ಇರುವ ಕಿಸ್ತನ್ನು ಪೂರ್ತಿ ವಸೂಲು ಮಾಡಲು ಪೂರ್ಣ ಪ್ರಯತ್ನ ಮಾಡಲಾಗುತ್ತಿದೆ.